ನಮ್ಮಂಗ್ಡಿನೂ ದೊಡ್ಡ ಮಾಡಕು. ಅದ್ಕೆಲ್ಲ ಈಗ ದುಡ್ಡಿಲ್ಲೆ. ಮಳೆಗಾಲ ಬೇರೆ ಬಂತು. ಲಾಂಚ್ ಶುರು ಆಯ್ದು. ಬೇಗ ಏನಾದ್ರೂ ಒಂದು ನಿರ್ಧಾರ ಮಾಡವ್ವು' ಅಮ್ಮ ಹಾಗೆಂದಾಗ ಶ್ರೀಮುಖನಿಗೆ ಬೇಸರವಾಯಿತು. ಹಾಗಂತ ಅದೇನೂ ಅವನಿಗೆ ಗೊತ್ತಿಲ್ಲದ ಸತ್ಯವಾಗಿರಲಿಲ್ಲ. ದಿನಕ್ಕೊಂದು ಇನ್ನೂರು, ಮುನ್ನೂರು ರೂಪಾಯಿ ಲಾಭವಾಗದ ಹೊರತು ಯಾವ ಅಂಗಡಿಯೂ ಉಳಿಯುವುದಿಲ್ಲ. ಹೀಗಿರುವಾಗ ಒಟ್ಟು ವ್ಯಾಪಾರವೇ ಅಷ್ಟಾಗುತ್ತಿಲ್ಲ. ಇನ್ನು ತನ್ನಂಗಡಿಯಲ್ಲಿ ಉಳಿಯುವುದು ಮುಚ್ಚಿದ ಬಾಗಿಲೊಂದೇ ಅನ್ನಿಸಿ ಅವನಿಗೆ ಸಂಕಟವಾಯಿತು.

ಅಪ್ಪನ ಆತ್ಮ ನರಳುತ್ತಿದೆಯಾ?

ಅಂಗಡಿಯ ಅಂಗಳದಲ್ಲಿ ಇನ್ನೂ ಯುವಕನಾಗಿಯೇ ಇರುವ ಅಪ್ಪ ಅಮ್ಮನ ಜೊತೆ ನಿಂತಿರುವ ಫೋಟೊವನ್ನೇ ದಿಟ್ಟಿಸುತ್ತಾ ಯೋಚಿಸಿದ. ಇಂಥಾ ಅದೆಷ್ಟು ಕಷ್ಟಗಳನ್ನು ನೋಡಿರಲಿಲ್ಲ ಅಪ್ಪ? ವಾರಗಟ್ಟಲೆ ಗಿರಾಕಿಯೇ ಬರದ ದುರ್ಭರ ಮಳೆಗಾಲಗಳು ಅವನ ಬದುಕಿನಲ್ಲಿ ಬಂದವು. ಒಂದು ಸಲವಂತೂ ನೀರು ತೀರಾ ಅಂಗಡಿಯ ಅಂಗಳಕ್ಕೇ ಬಂದಿತ್ತು. ಬೆಳಗ್ಗೆ ಬಾಗಿಲು ತೆಗೆಯಲು ಹೋದವನನ್ನು ಅಂಗಡಿಯ ಗೋಡೆಗೆ ತಳಕ್ ತಳಕ್ ಎಂದು ಬಡಿಯುತ್ತಿದ್ದ ಅಲೆಗಳು ಸ್ವಾಗತಿಸಿದ್ದವು. ಹೇಳು ಅಪ್ಪಾ... ಹೇಗೆ ಹಿಮ್ಮೆಟ್ಟಿಸಿದೆ ಆ ನೀರನ್ನು? ಹೇಗೆ ಸೋಲಿಸಿದೆ ಆ ಮಳೆಗಾಲವನ್ನು? ಒಂದೇ ಒಂದು ರೂಪಾಯಿ ಹುಟ್ಟದ ಹಗಲುಗಳನ್ನು ಹೇಗೆ ಕಳೆದೆ? ವ್ಯಾಪಾರವೇ ಆಗದ ತಿಂಗಳುಗಳ ಹೇಗೆ ದೂಡಿದೆ? ಅದರಾಚೆಗೂ ಹೇಗೆ ವ್ಯಾಪಾರಸ್ಥನಾಗಿಯೇ ಉಳಿದೆ? ಇದೇ ಏನು ತಪಸ್ಸೆಂದರೆ? ಇದೇ ಏನು ಕೆಲಸದ ಮೇಲಿನ ಪ್ರೀತಿಯೆಂದರೆ? ಇದೇ ಏನು ಬದುಕನ್ನು ಎದುರಿಸುವ ಬಗೆಯೆಂದರೆ?

ಇದೇ ಪ್ರಶ್ನೆಯನ್ನು ಕೇಳಲೆಂದು ಆ ಸಂಜೆ ಮನೋಹರಿಗೆ ಕರೆ ಮಾಡಿದ. ಆದರೆ, ಅವಳು ಅದಕ್ಕಿಂತ ದೊಡ್ಡ ಪ್ರಶ್ನೆಯೊಂದನ್ನು ಅವನಿಗಾಗಿ ಎತ್ತಿಟ್ಟುಕೊಂಡಿದ್ದಳು. 'ಅಣ್ಣನ ಹತ್ರ ಮಾತಾಡಿದೆ. ಒಪ್ಪಲಿಲ್ಲ. ಬಿಲ್ಕುಲ್ ಆಗೋದೇ ಇಲ್ಲ ಅಂದ. ಹಟ ಮಾಡಿದೆ. ಉದ್ಯೋಗ ಇಲ್ಲ, ಚಿಕ್ಕ ಅಂಗಡಿ... ಅದ್ರಲ್ಲೇನು ಸಿಗತ್ತೆ? ಆಮೇಲೆ ನೀನೇ ಪಶ್ಚಾತ್ತಾಪ ಪಡ್ತೀಯ ಅಂದ. ಮತ್ತೂ ಹಟ ಮಾಡಿದೆ. ಸರಿ. ಬೆಂಗಳೂರಿಗೆ ಬಂದು ಯಾವುದಾದರೂ ಕೆಲಸಕ್ಕೆ ಸೇರಿದರೆ ಮಾಡ್ಕೊಡ್ತೀನಿ ಅಂದ' ಎಂದಳು.

ಆಡಲಿಕ್ಕೆ ತನ್ನ ಬಳಿ ಮಾತೇ ಇಲ್ಲ ಎಂಬಂತೆ ಶ್ರೀಮುಖ ಮೌನವಾದ. ಅವಳೇ ಮುಂದುವರೆಸಿದಳು.

'ಬಂದ್ಬಿಡು ಶ್ರೀ. ಇನ್ನೂ ಎಷ್ಟು ದಿನ ಅಂತ ಅಂಗಡಿಯನ್ನೇ ನಂಬಿಕೊಳ್ತೀಯ? ಇಬ್ಬರೂ ದುಡಿಯೋಣ. ಪುಟ್ಟದೊಂದು ಮನೆ ಮಾಡೋಣ. ಅಮ್ಮನ್ನ ಕರೆಸಿಕೊಳ್ಳೋಣ. ಮಹಾನಗರ ತನ್ನ ಬಳಿಗೆ ಬಂದವರ ಕೈ ಬಿಡೋದಿಲ್ಲ... ಹೇಳು ಶ್ರೀ, ನಿನಗೆ ನಾನು ಬೇಡ್ವಾ?'

ಮೌನವಾಗಿಯೇ ಉಳಿದ ಶ್ರೀಮುಖ. ಈಗಲಾದರೂ ಅವನ ಮೌನ ಅವಳಿಗೆ ಅರ್ಥವಾಯಿತು. ಅವನ ಒಂದು ಕೈಯಲ್ಲಿ ತಾನಿದ್ದೇನೆ. ಇನ್ನೊಂದು ಕೈಯಲ್ಲಿ ಅಪ್ಪನ ಕನಸಿದೆ. ಅವನೀಗ ಎರಡನ್ನೂ ಬಿಡಲಾಗದ, ಎರಡನ್ನೂ ಸೇರಲಾಗದ ನಡು ನೀರಿನ ದೋಣಿಯಾಗಿದ್ದಾನೆ.

'ಶ್ರೀ...'

ಅವಳು ದನಿ ತಗ್ಗಿಸಿದಳು.

ಅವನು 'ಹ್ಞೂಂ' ಎಂದ.

'ನಿನಗೆ ಗೊತ್ತಾ ಶ್ರೀ? ಮದುವೆಯೆಂಬ ಕನಸು ಬೀಳುವುದು ನಿಂತು ಹತ್ತು ವರುಷವೇ ಆಗಿತ್ತು. ನನಗೆ ಇಪ್ಪತ್ತಾರು, ಇಪ್ಪತ್ತೆಂಟು ವರ್ಷವಿದ್ದಾಗ ಗೆಳತಿಯರೆಲ್ಲ ಒಬ್ಬೊಬ್ಬರಾಗಿ ಮದುವೆಯಾದರು. ಊರಿಗೆ ಮರಳಿ ಬರುವ ಅವರ ಜೊತೆ ಗಂಡನಿರುತ್ತಿದ್ದ. ಅವರ ಮಕ್ಕಳ ಇಂಚಿಂಚು ಬೆಳವಣಿಗೆಯನ್ನೂ ಅವರ ವಾಟ್ಸಾಪ್ ಸ್ಟೇಟಸ್ ನಲ್ಲೇ ನೋಡುತ್ತಿದ್ದೆ. ಒಬ್ಬಳ ಗಂಡ ವಾಚು ತಂದು ಕೊಡುತ್ತಾನೆ. ಇನ್ನೊಬ್ಬಳ ಮಗು ಮೊದಲ ಬಾರಿ ಹೊಸಿಲು ದಾಟುತ್ತದೆ. ಇನ್ನೊಬ್ಬನ ಮಗನದು ಶಾಲೆಯ ಮೊದಲ ದಿನ. ಅವರೆಲ್ಲರಿಗೂ ಅವರದೇ ಆದ ಕುಟುಂಬವಿದೆ. ಜ್ವರ ಬಂದರೆ ಆಸ್ಪತ್ರೆಗೆ ಒಯ್ಯುವ ಗಂಡನಿದ್ದಾನೆ. ಬಾಯ್ತುಂಬಾ ಮೊಸರು ಮಾಡಿಕೊಂಡು 'ಅಮ್ಮಾ' ಅಂತ ಕೈ ಚಾಚಿ ಓಡಿ ಬರೋ ಮಕ್ಕಳಿದ್ದಾರೆ. ಅವರನ್ನೆಲ್ಲ ಮುತ್ತೈದೆ ಪೂಜೆಗೆ ಕರೆದು ಬಾಗೀನ ಕೊಡ್ತಾರೆ. ಆದರೆ, ಹೇಳು ಶ್ರೀ... ನನ್ನ ಬದುಕಿನಲ್ಲಿ ಏನಿದೆ? ಅಮ್ಮ ನಮ್ಮ ಮನೆಯ ಹಿರಿಯಳಾಗಿ ಉಳಿದಿರುವುದು ರೇಷನ್ ಕಾರ್ಡ್ ನಲ್ಲಷ್ಟೇ. ಅಕ್ಕನಿಗೆ ಅವಳ ಗಂಡ, ಮನೆ, ಅತ್ತೆಯ ಖಾಯಿಲೆಗಳು ಅನ್ನೋ